# ವಿದ್ವಾನ್ ಎನ್. ರಂಗನಾಥಶರ್ಮರವರಿಗೆ ಶುಭಾಶಂಸೆ

ಹೆಚ್. ಎಂ. ತಿಮ್ಮಪ್ಪ

ಶ್ರೀಮನ್ಮಂಗಳ ಮೂರ್ತಿ ನಾಗಮುಖನಿಂಗಾರಂಭದೊಳ್ವಂದಿಸು ।
ತ್ತಾಮಾಹೇಶ್ವರಿಯಾದಿಶಕ್ತಿಯ ಪದಾಂಭೋಜಕ್ಕೆ ಮೈಯಿಕ್ಕಿ ಮೇಣ್ ॥
ಧೀಮಾತೆಶ್ರುತಿರೂಪಿ ವಾಣಿಗೆರಗುತ್ತಾಂ ಬೇಡುವೆಂ ಭಕ್ತಿಯಿಂ ।
ಸಮ್ಮಾನೋತ್ಸವ ಕಾರ್ಯಕೀಯಲಿ ಸದಾ ನಿರ್ವಿಘ್ನಮಂ ಭದ್ರಮಂ ॥1॥

ಭರತಮಾತೆಯ ನೊಸಲ ತಿಲಕದಂತೆಸೆಯುವೀ ।
ಸಿರಿಯ ಕರ್ನಾಟಕದ ಚೆಲುವಿನೈಸಿರಿನಾಡು ।
ಸುರಸುಂದರರದಬೀಡು ಪ್ರಕೃತಿಸಿರಿನೆಲೆವೀಡು ಮಲೆನಾಡು ಕಲೆಯನಾಡು ॥
ಕರಮೆಸೆವುದದರೊಳಗೆ ಶಿವಮೊಗ್ಗ ಜಿಲ್ಲೆಯಾ ।
ಸೊರಬವಂತದರೆಡೆಯೊಳಿನ್ನೇಂ ಸುಶೋಭಿಪುದೊ ।
ಕಿರುವಳ್ಳಿ ನಡಹಳ್ಳಿ ಹೊಲಗದ್ದೆ ತೆಂಗು ಕೌಂಗೆಲೆವಳ್ಳಿ ತೋಟದಿಂದೆ ॥2॥

ಉರುತರದ ಸೊಗಸನಿಂದೆಸೆಯುವೀ ಗ್ರಾಮದೊಳ ।
ಗಿರುವುದೈ ಪಲವಾರು ಹೈವವಿಪ್ರೋತ್ತಮರ ।
ಪರಿವಾರ ಸಕುಟುಂಬದಿಂದಲ್ಲಿ ಯೊಗ್ಗಟ್ಟಿನಿಂದೊಳ್ಳೆ ಕೃಷಿಕರೆನಿಸಿ ॥
ಮೆರೆವ ವಿಶ್ವಾಮಿತ್ರ ಗೋತ್ರದಾ ಜಾನಕೀ
ತಿರುಮಲರ್ಯೆಂಬ ದಂಪತಿಗಳ್ಗೆ ನಾಲ್ವರೊಳ್ ।
ಎರಡನೆಯ ಸುತರೆನಿಸಿ ರಂಗನಾಥರ್ ಮೆರೆದರೈ ಸ್ವಯಂಪ್ರತಿಭೆಯಿಂದೆ ॥3॥

ವ್ಯಾಕರಣ ಶಾಸ್ತ್ರದೊಳ್ ಪಾಂಡಿತ್ಯಮಂ ಗಳಿಸಿ ।
ಈ ಕನ್ನಡದ ರಾಜಧಾನಿ ಬೆಂಗ್ಳೂರಿನೊಳ್ ।
ವ್ಯಾಕರಣದಾಚಾರ್ಯರೆನಿಸಿದರ್ ಸಂಸ್ಕೃತದ ಹಿರಿಯ ವಿದ್ಯಾಲಯದೊಳು ॥
ವ್ಯಾಕರಣಶಾಸ್ತ್ರವೇ ಸಾಕಾರತಳೆದಂತ ।
ನೇಕ ವಿದ್ವನ್ಮಣಿಗಳೊಳಗೆ ತಲೆವಣಿಯು ವೈ- ।
ಯಾಕರಣ ಸಿರಿರಂಗನಾಥರೆಂ ಬೆಳಗುವರೊ ವಿದ್ವತ್ಪ್ರಕಾಶದಿಂದೆ ॥4॥

ದೊರೆವಡೆದ ರಾಷ್ಟ್ರಪ್ರಶಸ್ತಿ ಸಂಮಾನಿತರ್ ।
ನಿರುತ ಶಾಸ್ತ್ರಾಧ್ಯಯನಶೀಲರ್ ಸುಶೀಲರನ ।
ವರತ ಸಚ್ಚಿಂತಕರ್ ಮಂಥಕರ್ ಹಿತಚಿಂತಕರ್ ಶ್ರೇಷ್ಠ ವಿದ್ವಾಂಸರು ।
ಪರಿಪರಿಯ ಶಾಸ್ತ್ರಾರ್ಥ ಬಲ್ಲಿದರ್ ಒಳ್ಳಿದರ್ ।
ತರತರದೊಳುದ್ಗ್ರಂಥ ರಚನಾ ವಿಶಾರದರ್ ।
ಸರಳಾನುವಾದಕರ್ ವಾದಕರ್ ಬೋಧಕರ್ ಸಂಶೋಧಕರ್ ಶರ್ಮರು ॥5॥

ಗುಣದೊಳ್ ಸಾಗರದಂತುದಾರಚರಿತರ್ ಸದ್ಧರ್ಮನಿಷ್ಠಾಪರರ್ ।
ಘನಪಾಂಡಿತ್ಯ ವಿಶಾರದರ್ ಉಭಯಭಾಷಾಪಂಡಿತರ್ ಮಂಡಿತರ್ ॥
ಜನರೊಳ್‌ಪೆರ್ಮೆಯನಾಂತವರ್ ಮಿಗೆ ಸದಾ ಸಾಹಿತ್ಯಸೇವಾರತರ್ ।
ಅನುಗಾಲಂ ಶುಭವೀಯಲೆಂದವರಿಗಂ ತಿಮ್ಮಪ್ಪ ತಾಂ ಬೇಡುವಂ ॥6॥

ಋಣ ಮನುಷ್ಯನಿಗೆ ಒಂದು ಕೊಳೆಯಂತೆ, ಮನಸ್ಸು,
ಮಾತು, ಮೈ—ಎಲ್ಲವನ್ನೂ ವ್ಯಾಪಿಸುವ ಅಶೌಚ.

—'ಸೂಕ್ತಿ-ವ್ಯಾಪ್ತಿ'ಯಲ್ಲಿ
ಶ್ರೀ ರಂಗನಾಥ ಶರ್ಮರು